ದಿಃ 07-**11-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಐಎಂಪಿ. ವಕೀಲರಿಂದಃ**

ನನ್ನ ತಂದೆ ಮತು ನನ್ನ ದೊಡ್ಡಪ್ಪ ಒಟ್ಟಿಗೆ ಇದಾಗ ಅವರ ಕುಟುಂಬಕ್ಕೆ 8 ಎತ್ತುಗಳು ಇದ್ದವು ಎಂದರೆ ನಿಜ. ನನ್ನ ತಂದೆ ಮತು ನನ್ನ ದೊಡ್ಡಪ್ಪ ಬೇರೆ ಆದ ಮೇಲೆ ಅವರಿಗೆ ತಲಾ 4 ಎತ್ತುಗಳು ಪಾಲಿಗೆ ಬಂದಿದವು ಎಂದರೆ ನಿಜ. ನನ್ನ ದೊಡ್ಡಪ್ಪ ನಿಗೆ ಸದರಿ ವಿಬಾಗದಲಿ ಕುಟುಂಬದ ಸಣ್ಣ ಮನೆ ಪಾಲಿಗೆ ಬಂದಿತು. ನನ್ನ ತಂದೆಯ ಪಾಲಿಗೆ ದೊಡ್ಡ ಮನೆ ಬಂದಿತು. ನನ್ನ ದೊಡ್ಡಪ್ಪ ಮತ್ತು ಅವರ ಕುಟುಂಬದವರು ಸಣ್ಣ ಮನೆಯಲ್ಲಿ ಸುಮಾರು 55 ವರ್ಷಗಳಿಂದ ವಾಸವಿದ್ದಾರೆ. ನನ್ನ ದೊಡ್ಡಪ್ಪ ತೀರಿಕೊಂಡು ಸುಮಾರು 15-18 ವರ್ಷಗಳು ಆಗಿರುತ್ತವೆ. ನನ್ನ ದೊಡ್ಡಪ್ಪ ಅವರ ಪಾಲೆಗ ಬಂದಿದ್ದ ಸಣ್ಣ ಮನೆಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ದೊಡ್ಡಪ್ಪನ ಕುಟುಂಬಕ್ಕೆ ಈಗ ಸುಮಾರು 200 ಎಕರೆ ಜಮೀನು ಇರಬಹುದು. ನನ್ನ ದೊಡ್ಡಪ್ಪ ಬೇರೆಯಾದ ನಂತರ ಸಾಕಷ್ಟು ಜಮಿನುಗಳನು ಖರಿದಿಸಿರುತ್ತಾರೆ ಎಂದರೆ ನಿಜ.

ನನ್ನ ತಾಯಿ ರತ್ನಮ್ಮ ಇವರ ತವರು ಊರು ಜೇರಬಂಡಿ ಗ್ರಾಮ ಎಂದರೆ ನಿಜ. ನನ್ನ ತಂದೆ ತಾಯಿಯ ಮದುವೆ 1968 ರಲಿ ಆಗಿರುತ್ತದೆ. ನನ್ನ ತಾಯಿಗೆ ಅವಳ ತವರು ಮನೆಯವರು 26 ಎಕರೆ ಜೇರಬಂಡಿ ಗ್ರಾಮದಲ್ಲಿರುವ ಜಮೀನನು ಕೊಟ್ಟಿದ್ದರು. ಸದರಿ ಜಮೀನನ್ನು ನನ್ನ ತಾಯಿ ಲೀಸಗೆ ನೀಡಿದ್ದರು. ನನ್ನ ತಾಯಿಗೆ ಪ್ರತಿ ವರ್ಷ 30-40 ಸಾವಿರ ಲೀಸ ಹಣ ಬರುತ್ತಿತು. ನನ್ನ ಮದುವೆ 1991 ರ ಜೂನ್ ನಲಿ ಆಗಿರುತ್ತದೆ. ನಾನು ದಿಃ 1.6.1974 ರಲಿ ಜನಿಸಿರುತೇನೆ. ನ್ನನ ಮದುವೆಯ ಸಮಯದಲಿ ನನ್ನ ತಾಯಿ ತನ್ನ ಸ್ವಂತ ಹಣದಿಂದ ಬಂಗಾರ ಮತು ಬೆಳ್ಳಿ ಆಭರಣಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಲೀಸ ಹಣದಿಂದ ಬಂಗಾರ ಖರಿದಿಸುತ್ತಿದ್ದರು ಎಂದರೆ ನಿಜ. ನನ್ನ ತಾಯಿಯ ಆಸ್ತಿಯ ಪೈಕಿ 2 ಎಕರೆ ಜಮೀನು ಕೃಷ್ಣ ಜಲಾ ಬಾಗ್ಯ ನಿಗಮದವರು ಸ್ವಾದಿನಪಡಿಸಿಕೂಂಡಿದ್ದರು ಎಂದರೆ ಸ್ವಾದಿನಪಡಿಸಿಕೊಂಡಿರಬಹುದು ನನಗೆ ಗೊತ್ತಿಲ್ಲ. ಸದರಿ ಸ್ವಾದಿನಪಡಿಸಿಕೊಂಡ ಜಮಿನಿನ ಪರಿಹಾರ ಹಣ ನನ್ನ ತಾಯಿಗೆ ಬಂದಿತು ಎಂದರೆ ಸರಿಯಲ್ಲ.

ನನ್ನ ತಂದೆ 10 ನೇ ತರಗತಿವರೆಗೆ ಒದಿದ್ದರು. ನಾನು ಸಹ 10 ನೇ ತರಗತಿಯವರೆಗ ಒದಿರುತೇನೆ. 4 ನೇ ಪ್ರತಿವಾದಿ 8 ನೇ ತರಗತಿವರೆಗೆ ಓದಿರುತಾರೆ. 2 ಮತು 3 ನೇ ಪ್ರತಿವಾದಿಯರು ಪ್ರಥಮ ಪಿಯುಸಿ ವರೆಗೆ ಓದಿರುತ್ತಾರೆ. 3 ನೇ ಪ್ರತಿವಾದಿ ತನ್ನ ಒದು ಮುಗಿಸಿ ಪವನ್ ಎಂಬುವವರ ಔಷದಿ ಅಂಗಡಿಯಲಿ ಕೆಲಸಕ್ಕೆ ಸೇರಿದ್ದರು ಎಂದರೆ ನಿಜ. ಅವನು 1 ವರ್ಷದ ವರೆಗೆ ಸದರಿ ಅಂಗಡಿಯಲಿ ಕೆಲಸ ಮಾಡಿರುತ್ತಾರೆ. 3 ನೇ ಪ್ರತಿವಾದಿ ಕೆಲಸ ತಿಳಿದುಕೊಳುವ ಸಲುವಾಗಿ ಔಷದಿ ಅಂಗಡಿಗೆ ಹೊಗುತ್ತಿದ್ದರು. ಅವರಿಗೆ ಸಂಬಳ ನೀಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಬಳಿ ಇದ್ದ ಬಂಗಾರ ಮತು ಹಣವನ್ನು ಅವಶ್ಯಕತೆ ಬಿದ್ದಾಗ ನೀಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ತನ್ನ ಮಕ್ಕಳಿಗೆ ಹಣ ಮತು ಭಂಗಾರ ನೀಡುರುವುದಿಲ್ಲ. ಅವಳು ಬಂಗಾರ ಮತು ಹಣವನ್ನು ಆಗಾಗ 2 ಮತು 3 ನೇ ಪ್ರತಿವಾದಿಯರಿಗೆ ನೀಡುತ್ತಾ ಬಂದಿರುತ್ತಾರೆ.

2001 ರಲ್ಲಿ ನನ್ನ ತಾಯಿ 3 ನೇ ಪ್ರತಿವಾದಿಗೆ ಸ್ವಂತ ಔಷದಿ ಅಂಗಡಿ ತೆರೆಯಲು 50 ಸಾವಿರ ಹಣ ನೀಡಿದ್ದಳು ಎಂದರೆ ನಿಜ. ಸದರಿ ಹಣ ಪಡೆದುಕೊಂಡು 3 ನೇ ಪ್ರತಿವಾದಿ ಪವನ್ ಎಂಬುವವರ ಸಹಾಯದಿಂದ ನಂದಿ ಪಾರ್ಮ ಎಂಬ ಔಷದಿ ಅಂಗಡಿಯನ್ನು ತೆರೆದಿದ್ದರು ಎಂದರೆ ನಿಜ. 3 ನೇ ಪ್ರತಿವಾದಿ ಸದರಿ ಉದೋಗ ಸಲುವಾಗಿ ಬ್ಯಾಂಕಿನಲಿ ಸಾಲ ಮಾಡಿದ್ದರು ಎಂದರೆ ನಿಜ. 2001 ರಿಂದ 3 ನೇ ಪ್ರತಿವಾದಿ ತನ್ನ ಔಷದಿ ಅಂಗಡಿ ವ್ಯಾಪಾರವನ್ನು ಬೆಳೆಸುತ್ತಾ ಬಂದಿರುತ್ತಾರೆ.

ನಮ್ಮ ಕುಟುಂಬಕ್ಕೆ ಮಹಿಂದ್ರಾ ಕಂಪನಿಯ 2 ಟ್ರಾಕ್ಟರಗಳು , 2 ಭತ್ತ ಕೊರೆಯುವ ಮಷಿನ್ (ಟ್ರಾಕ್ಟರ್) ಇದೆ. ಅವುಗಳ ನಂಬರಗಳನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಟ್ರಾಕ್ಟರಗಳು ನನ್ನ ತಂದೆಯ ಹೆಸರಿನಲ್ಲಿ ಇದ್ದವು. ಸದರಿ ಟ್ರಾಕ್ಟರಗಳು ನನ್ನ ತಂದೆಯ ಹೆಸರಿನಲಿ ಇದ್ದ ಬಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಅವಿಭಕ್ತ ಕುಟುಂಬಕೆ ಟ್ರಾಕ್ಟರಗಳು ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನ್ನನ ತಾಯಿ ನೀಡಿದ ಹಣ ಮತು ಬಾಂಕಿನಿಂದ ಸಾಲ ಮಾಡಿ ಸದರಿ 3 ಟ್ರಾಕ್ಟರಗಳನ್ನು ಖರಿದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಕುಟುಂಬದ ಆಸ್ತಿಯಿಂದ ಬಂದ ಆದಾಯ ದಿಂದ ಖರೀರಿದಿಸಿದಾಗಿ ನುಡಿಯುತ್ತಾರೆ. ಸದರಿ 3 ಟ್ರಾಕ್ಟರಗಳನ್ನು ಈ ದಾವೆ ದಾಖಲಿಸುವ ಮುಂಚೆ ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಟ್ರಾಕ್ಟರಗಳಿಂದ ಲಾಭ ಬರದ ಕಾರಣ ಅವುಗಳನ್ನು ಮಾರಾಟ ಮಾಡಿ ಸಾಲ ತಿರಿಸಿರುತ್ತಾರೆ ಎಂದರೆ ಸರಿಯಲ್ಲ.

ನಂದಿ ಪಾರ್ಮ ಅಂಗಡಿ , 3 ಟ್ರಾಕ್ಟರಗಳು 2 ಮತು 3 ನೇ ಪ್ರತಿವಾದಿಯ ಸ್ವಂತ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಹಚ್ ಆರ್ ಬಿ ಲೇಔಟ್ ನಲಿ ಇರುವಂತಹ

ಪ್ಲಾಟ್ ಅನ್ನು ನನ್ನ ತಾಯಿ ತನ್ನ ಸ್ವಂತ ಹಣದಿಂದ ಖೀರಿದಿಸಿರುತ್ತಾರೆ ಎಂದರೆ ನಿಜ. ಸಾಕ್ಷಿ ಪುನಃ ಕುಟುಂಬದ ಆಸ್ತಿಯಿಂದ ಬಂದ ಆದಾಯದಿಂದ ಖರೀದಿಸಿದಾಗಿ ನುಡಿಯುತ್ತಾರೆ. ಸದರಿ ಪ್ಲಾಟಅನ್ನು ನನ್ನ ತಾಯಿ ತನಗೆ ಲೀಸ ಮೂಲಕ ಬಂದ ಹಣದಿಂದ ಖರಿದಿಸಿದ್ದರು ಎಂದರೆ ಸರಿಯಲ್ಲ.

ನನ್ನ ತಾಯಿ ಅನರೊಗ್ಯದಿಂದ ತೀರಿಕೊಂಡಿದ್ದರು ಎಂದರೆ ನಿಜ. ಅವಳು ಕೊರೊನಾ ಸೊಂಕು ತಾಗಿ ತೀರಿಕೊಂಡಿರುತ್ತಾಳೆ. ಕೊರೊನಾ 2020-21 ರಂದು ಸೊಂಕು ಹರಡಿತ್ತು. ನನ್ನ ತಾಯಿ ಕ್ಯಾನರ್ ಕಾಯಿಲೆಯಂದ ಬಳಲುತ್ತಿದ್ದರು ಮತು ಅವರು ಡಾಃ ಶೇಕರ್ ಪಾಟೀಲ್ ರವರ ಹೆಚ್ ಸಿ ಜಿ ಆಸ್ಪತ್ರೆ ಬೆಂಗಳೂರಿನಲಿ ಚಿಕಿತ್ಸೆ ಪಡೆದಿದ್ದಿರು ಎಂದರೆ ನಿಜ. ಸಾಕ್ಷಿ ಅವರು ಗುಣಮುಖನಾಗಿದ್ದಳು ಎಂದು ನುಡಿಯುತ್ತಾರೆ. ನನ್ನ ತಾಯಿ ಬಹಳ ವರ್ಷಗಳವರೆಗೆ ಆ ರೀತಿ ಕ್ಯಾನಸರ್ ಕಾಯಿಲೆಗೆ ಚಿಕಿತ್ಸೆ ಪಡೆದಿದ್ದರು ಎಂದರೆ ಸಾಕ್ಷಿ 1 ವರ್ಷ ಮಾತ್ರ ಪಡೆದಿದರು ಎಂದು ನುಡಿಯಿುತ್ತಾರೆ. ನನ್ನ ತಾಯಿ ಬೆಂಗಳೂರಿನ ಆಸ್ಪತ್ರೆಯಲಿ ಚಿಕಿತ್ಸೆ ಪಡೆಯಲು ಹೋದಾಗ ಅವಳಿಗೆ ಕ್ಯಾನ್ಸರ್ ಯಾವ ಸ್ಟೇಜ್ ನಲಿ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ಔಷದಿ ಉಪಚಾರಕ್ಕೆ ಸುಮಾರು 20 ಲಕ್ಷ ಖರ್ಚು ಮಾಡಲಾಗಿದೆ ಎಂದರೆ ನಿಜ. ಸದರಿ ಔಷದಿ ಖರ್ಚಿಗಾಗಿ ಸಾಲ ಮಾಡಿಲಾಗಿತು ಎಂದರೆ ಸರಿಯಲ್ಲ.

ನನಗೆ ನೀಲೊಗಲ್ ಗ್ರಾಮದ ರಜಾಕ್ ಸಾಬ್ ಎಂಬುವರ ಪರಿಚಯ ಇಲ್ಲ. ಸದರಿ ರಜಾಕ್ಾಸಾಬ್ ಎನ್ನುವವರಿಗೆ ನನ್ನ ತಾಯಿಯ ಜೀವಿತಾವದಿಯಲಿ ಹಚ್ ಆರ್ ಬಿ ಪ್ಲಾಟ್ ಅನ್ನು ಮಾರಾಟ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಪ್ಲಾಟಿನಲಿ ರಜಾಕ್ ಸಾಬ್ ಇವರು ವಾಸವಿದಾರೆ ಎಂದರೆ ಸಾಕ್ಷಿ ಅವರಿಗೆ ಬಾಡಿಗೆಗೆ ನೀಡಲಾಗಿದೆ ಎಂದು ನುಡಿಯುತ್ತಾರೆ. ನನ್ನ ತಾಯಿ ತೀರಿಕೊಂಡಿದ್ದರಿಂದ ಸದರಿ ಪ್ಲಾಟ್ ಕುರಿತು ಖೀರಿದಿ ಪತ್ರ ನೊಂದಾಯಿಸಲು ಸಾದ್ಯವಾಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ಲಾಟು ನಮ್ಮ ಅವಿಭಕ್ತ ಕುಟುಂಬದ ಆಸ್ತಿ ಅಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದರಿಂದ ಮುಂದೂಡಲಾಯಿತು.**

ಓದಿ ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ರಾಯಚೂರು.